## ನವಿಲುಗನ್ನಡಿ

- ನಿರಂಜನರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಅವರನ್ನು ಕುರಿತ ಸಿದ್ದಲಿಂಗಪಟ್ಟಣ ಶೆಟ್ಟರ ಲೇಖನ ಸಕಾಲಿಕ. ನಿರಂಜನ ದಂಪತಿಯ ಆತ್ಮೀಯತೆ, ಅಂತಃಕರಣ ಲೇಖನದಲ್ಲಿ ಸುಪ್ರಕಟವಾಗಿದೆ.

**ಎಸ್. ಚನ್ನಪ್ಪ, ಮೈಸೂರು**

- ಕಾವ್ಯಗಳು ನೊಂದವರಿಂದ ಹೆಚ್ಚು ಮೂಡುತ್ತವೆ ಎಂಬುದಕ್ಕೆ ಉದಾಹರಣೆ, 'ಕಾವ್ಯ ಸಂಕ'ದಲ್ಲಿ ಪರಿಚಯವಾಗುತ್ತಿರುವ ಕವಯಿತ್ರಿಯರು. ಆಗಸ್ಟ್‌ನಲ್ಲಿ ಪರಿಚಯಿಸಲಾದ ಅಬೆಡಿ ಮಿರಿಯಲ್ ಅವರು ತಮ್ಮ ಚಿಕ್ಕ ವಯಸ್ಸಿನಲ್ಲೇ ನಿರಾಶ್ರಿತ ಶಿಬಿರದಲ್ಲಿದ್ದುಕೊಂಡು ಅನುಭವಿಸಿದ ಯಾತನೆಗಳ ಬಗ್ಗೆ ಮಾರ್ಮಿಕವಾಗಿ ಕಾವ್ಯ ರಚಿಸುತ್ತಿರುವುದು ಹೆಮ್ಮೆ ಎನಿಸಿತು.

**ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**


- ಸರೋದ್ ಸರೋವರದ ಸೌಗಂಧಿಕಾ ಪುಷ್ಪ ಮತ್ತು ತಾರಾಲೋಕದಲ್ಲಿ ವಿಹಾರ! ಈ ಬರಹಗಳು ರಾಜೀವ ತಾರಾನಾಥರ ಮಹೋನ್ನತ ವ್ಯಕ್ತಿತ್ವದ ಅಮೋಘತೆಯನ್ನು ಸಾರಿವೆ. ಕನ್ನಡ ನಾಡಿನ ಸರ್ವಸ್ವವೇ ಇಂತಹ ದಿಗ್ಗಜರ ಬಾಳು ಪ್ರಜ್ವಲಿಸಿದ ಪರಿ ಅನಿಸುವಲ್ಲಿ ಎರಡು ಮಾತಿಲ್ಲ. 'ಒಲಿದ ಹಾಡು' ಕಥೆ ಮನಸನ್ನು ಶರಣರ ಕಾಲಕ್ಕೆ ಕರೆದೊಯ್ದು ಹಗುರಗೊಳಿಸಿತು.

**ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ**

- ಚಿದಾನಂದ ಸಾಲಿ ಅವರ 'ತಾರಾಲೋಕದಲ್ಲಿ ವಿಹಾರ' ಹಾಗೂ ಶೈಲಜಾ ಮತ್ತು ವೇಣುಗೋಪಾಲ ಅವರ 'ಸರೋದ್ ಸರೋವರದ ಸೌಗಂಧಿಕಾ ಪುಷ್ಪ' ಲೇಖನಗಳು ಲಾಲಿತ್ಯಪೂರ್ಣವಾದ ಸುಂದರ ಬರಹಗಳು. ತಾರಾನಾಥರ ವ್ಯಕ್ತಿ ಚಿತ್ರಣದ ವಿವಿಧ ಮಗ್ಗಲುಗಳನ್ನು ಬಹು ರಸವತ್ತಾಗಿ ಹಾಗೂ ಚೇತೋಹಾರಿಯಾಗಿ ನಿರೂಪಿಸುವುದರ ಜೊತೆಗೆ ತಾರಾನಾಥರ ಬಗ್ಗೆ ಗೌರವ ಮತ್ತು ಆಪ್ತತೆಯ ಭಾವ ಮೂಡಿಸುತ್ತವೆ.

**ಕನಕಪ್ಪ ವಾಗನಗೇರಿ, ಸುರಪುರ**

- ಶೆಫ್ ಆಗಬೇಕೆಂದು ಆಸೆ ಪಡುತ್ತಿದ್ದವರು ಕನ್ನಡ ಅಧ್ಯಾಪಕರು ಆದದ್ದು ಎಷ್ಟು ಸ್ವಾರಸ್ಯಕರವೊ, ಅವರ ಪ್ರಬಂಧ 'ಪಾಕಶಾಲಾ ಪ್ರಪಂಚದೊಳಗೆ' ಇನ್ನೂ ಕುತೂಹಲಕಾರಿ. ಹೋಟೆಲ್‌ಗಳ ಹೆಸರು ಜಾತಿ ಸೂಚಕವಾಗಿದ್ದು, ಹೆಸರು ನೋಡಿಯೇ ಯಾವ ರೀತಿ ಊಟ, ತಿಂಡಿ ಸಿಗಬಹುದೆಂಬುದನ್ನು ಲೆಕ್ಕ ಹಾಕಬಹುದು ಎಂಬುದು ನಿಜಕ್ಕೂ ಸತ್ಯ. ಭಟ್ಟರ ಹೋಟೆಲ್ ಅಂದ ಕೂಡಲೇ ಬಾಳೆ ಎಲೆ, ಶಾಖಾಹಾರಿ. ಬಸಪ್ಪನ ಖಾನಾವಳಿ ಅಂದಕೂಡಲೇ ಉತ್ತರ ಕರ್ನಾಟಕದ ಊಟ, ಆಂಧ್ರ ಹೋಟೆಲ್, ಮಿಲ್ಟ್ರಿ ಹೋಟೆಲ್ ಅಂದ ಕೂಡಲೇ ಎಲ್ಲ ರೀತಿಯ ಮಾಂಸಾಹಾರ ಇತ್ಯಾದಿ. ಆದರೆ ಯಾರೂ ಅಂಬೇಡ್ಕರ್ ಹೋಟೆಲ್ ಅಂತಲೋ, ದಲಿತರ ಹೋಟೆಲ್ ಅಂತಲೋ ಹೆಸರಿಡುವುದಿಲ್ಲವಲ್ಲ ಎಂಬುದು ನಿಜಕ್ಕೂ ಯೋಚಿಸಬೇಕಾದ್ದೆ. ಪಾಕಶಾಲಾ ಪ್ರಪಂಚ ನಿಜಕ್ಕೂ ವಿಸ್ಮಯಕಾರಿ ಎಂಬುದನ್ನು ಮುಸ್ತಾಫ ಕೆ.ಎಚ್. ಅವರು ಸೊಗಸಾಗಿ ವಿವರಿಸಿದ್ದಾರೆ.




**ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ**

- ಕಲೀಂಉಲ್ಲಾ ಅವರ ಬರವಣಿಗೆಯನ್ನು ಓದುವುದೇ ಪ್ರಿಯವಾದ ಸಂಗತಿ. ಫೋಟೊ ತೆಗೆಯುವ ಸಂದರ್ಭದಲ್ಲಿ ಆಗುವ ಪರದಾಟ, ಸಹಾಯಕರ ಬಗ್ಗೆ ಹೇಳುವ ರೀತಿ ಓದಲು ತುಂಬಾ ತಮಾಷೆ ಅನಿಸುತ್ತದೆ. 'ಡಾರ್ಲಿಂಗ್...' ಲೇಖನ ಓದುವಾಗ ನಾವೇ ಅಲ್ಲಿಗೆ ಹೋದ ಅನುಭವ ಮೂಡಿಸಿತು.

**ಶ್ಯಾಮಲಾ ಎಚ್.ಎನ್., ಬೆಂಗಳೂರು**